ಅಧ್ಯಕ್ಷರು : ಮಾನ್ಯ ರಾಜಣ್ಣನವರೇ, ಇದು ಪ್ರಶ್ನೋತ್ತರ ವೇಳೆ

Sri N. Rajanna : ನೀವು ಹೋಗಬೇಕಾದರೆ ನೋಡುತ್ತೀರಿ,ಇದು ನಿಮಗೇ ಗೊತ್ತಿದೆ. Traffic density you know, for example, ಉದಾಹರಣೆಗೆ ಮೇಕ್ರಿ ಸರ್ಕಲ್‌ನಲ್ಲಿ ಸುಮಾರು 2 ಕಿಲೋಮೀಟರ್‌ವರೆಗೆ ಗಾಡಿಗಳು ನಿಂತಿರುತ್ತವೆ.

ಅಧ್ಯಕ್ಷರು : ಅದಕ್ಕೆ ಎಲ್ಲಾ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್ : ಬೆಂಗಳೂರಿನ ಸಂಚಾರಿ ವ್ಯವಸ್ಥೆಗೆ, ಸಾರಿಗೆ ವ್ಯವಸ್ಥೆಗೆ ಹೆಚ್ಚು ಗಮನ ಕೊಡುಬೇಕು. ಬೇಕಾದರೆ ತಾವು ಅನುಮತಿ ಕೊಟ್ಟರೆ ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ.

Mr. Speaker : The problem is solved.

Sri N. Rajanna : I welcome the suggestion.

ಅಧ್ಯಕ್ಷರು : ಪ್ರಶ್ನೆ :245(2094)ಕ್ಕೆ ಸರ್ಕಾರದವರು ಸ್ವಲ್ಪ ಸಮಯ ಕೇಳಿದ್ದಾರೆ. ಏಕೆಂದರೆ, ಇನ್ನು ಇಡೀ ರಾಜ್ಯದಿಂದ ಮಾಹಿತಿ ತರಿಸಬೇಕಾಗಿರುತ್ತದೆ.

ಶ್ರೀ ಹೆಚ್. ಡಿ. ಬಸವರಾಜ್ : ನಾನು ಕೇಳಿರುವುದು 1994-95, 1995-96 ಮತ್ತು 1996-97 ಇದೆಲ್ಲಾ ಅವರ ಹತ್ತಿರ ಇದೆ. ಇದರಲ್ಲಿ ತರಿಸುವಂಥಾದ್ದು ಏನಿದೆ?

ಅಧ್ಯಕ್ಷರು : ಉತ್ತರ ತರಿಸಿಕೊಂಡಿದ್ದರೆ, ಸುಮ್ಮಸುಮ್ಮನೆ ಯಾರು ಸಮಯಾವಕಾಶ ಕೇಳುವುದಿಲ್ಲ. ಸ್ವಲ್ಪ ಮಾಹಿತಿ ಕಡಿಮೆ ಬಿದ್ದಿರುತ್ತದೆ. ತರಿಸಿಕೊಡುತ್ತಾರೆ. ಈ ಅಧಿವೇಶನ ಸುಮಾರು ಒಂದು ತಿಂಗಳು ಇರುತ್ತದೆ. ಆರ್ಜೆಂಟಾಗಿ ತರಿಸಿ ಮತ್ತೆ ನಿಮ್ಮ ಪ್ರಶ್ನೆಗೆ ಅವಕಾಶ ಮಾಡಿಕೊಡುತ್ತೇನೆ. ಸ್ವಲ್ಪ ಸಹಕರಿಸಿ.

ಅಧ್ಯಕ್ಷರು : ಕಂದಾಯ ಇಲಾಖಾ ಮಂತ್ರಿಗಳಿಗೆ ವರ್ಗಾವಣೆಯಾಗಿರುತ್ತದೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ನನಗೆ ಉತ್ತರ ಕೂಡ ಬಂದಿಲ್ಲ, ಪ್ರಶ್ನೆ ಮಾತ್ರ ಟೇಬಲ್ ಆಗಿದೆ. ನಾನು ಕೇಳಿರತಕ್ಕ ಪ್ರಶ್ನೆ ಅಬಕಾರಿ ಇಲಾಖೆಗೆ ಸಂಬಂಧಿಸಿದೆ. ಇದು ಕಂದಾಯ ಇಲಾಖೆಗೆ ಬರುವುದಿಲ್ಲ. ನನ್ನ ಪ್ರಶ್ನೆ ಕರೆಕ್ಟ್ ಇದೆ. ಇದಕ್ಕೆ ಉತ್ತರವನ್ನು ಅಬಕಾರಿ ಇಲಾಖೆಯವರೇ ಕೊಡಬೇಕು, ಕಂದಾಯ ಇಲಾಖೆಯವರು ಕೊಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ಇದರ ಬಗ್ಗೆ ಮುಖ್ಯಮಂತ್ರಿಯವರಿಗೆ ಸ್ವಲ್ಪ ವಿವರಿಸುತ್ತೇನೆ. ಇದು ಇವರ ಕ್ಷೇತ್ರದಲ್ಲಿ ಸ್ವಲ್ಪ ಜಮೀನು ಏನಿದೆ, ಈಚಲು ಮರ ಬೆಳೆಯತಕ್ಕಂತಾದ್ದು ಇದೆ. ಅಲ್ಲಿ ಈಚಲು ಮರಗಳು ಏನೂ ಇಲ್ಲ. Some people have been cultivating unauthorisedly for a very long time. That grant is pending. ಅವರ ಪ್ರಶ್ನೆಯನ್ನು ತಮಗೆ ಅಡ್ರೆಸ್ ಮಾಡಿದ್ದಾರೆ. ನಮ್ಮವರು ಕಂದಾಯ ಇಲಾಖಾ ಮಂತ್ರಿಗಳಿಗೆ ಬರುತ್ತೆಂದು ವರ್ಗಾವಣೆ ಮಾಡಿದ್ದಾರೆ.

because the excise land they don't come under the purview of the Revenue Minister. It is a policy matter wher ther land should be granted to occupants or not.....

ತಾವೇ ಉತ್ತರ ಹೇಳಿಬಿಟ್ಟರೆ ಸರಿಹೋಗುತ್ತದೆ. We will take it up. ಇವರು ಉತ್ತರ ಕೊಡಬೇಕೋ ಅವರು ಉತ್ತರ ಕೊಡಬೇಕೋ ಎಂದು ಕನ್‌ಫ್ಯೂಷನ್ ಆಗಿರುವುದರಿಂದ I will assure you next ಸಿ. ಎಂ. ಕೊಶ್ಚನ್ಸ್ ಇರುವ ದಿವಸ ತರಿಸಿಕೊಡುತ್ತೇನೆ.

ಶ್ರೀ ರಮೇಶ್ ಜಿಗಜಿಣಗಿ: ತಾವು ಪರ್ಮಿಷನ್ ಕೊಟ್ಟರೆ ಹೇಳುತ್ತೇನೆ. ನನಗೆ ಆ ಫೈಲು ಬಂದಿಲ್ಲ. ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ, ಇದು ಮಂತ್ರಿಮಂಡಲದ ಉಪಸಮಿತಿಯ ಮುಂದೆ ಪರಿಶೀಲನೆಯಲ್ಲಿದೆ. ಆದರೆ ಸಧ್ಯಕ್ಕೆ ಕಾನೂನಿನ ಅಡಿಯಲ್ಲಿ ಮಂಜೂರಾತಿ ಮಾಡುವುದಕ್ಕೆ ಬರುವುದಿಲ್ಲ. ಸಚಿವ ಸಂಪುಟದಲ್ಲಿ ತೀರ್ಮಾನವಾದ ಮೇಲೆ, ಮಂಜೂರಾತಿ ಮಾಡುವುದಕ್ಕೆ ಬಂದಿಲ್ಲ. ಸಚಿವ ಸಂಪುಟದಲ್ಲಿ ತೀರ್ಮಾನವಾದ ಮೇಲೆ, ಮಂಜೂರಿ ಮಾಡಲು ಕ್ರಮ ತೆಗೆದುಕೊಳ್ಳುವುದು ಸರಿ. ಈಗಾಗಲೇ ಬಹಳ ಜನ ಆ ಎಕ್ಸೈಸ್ ಲ್ಯಾಂಡನ್ನು ಬಡ ರೈತರು ಉಳುಮೆ ಮಾಡುತ್ತಾರೆ. ಇದು ನನ್ನ ಗಮನದಲ್ಲೂ ಇದೆ. ಹಿಂದೆ ಸ್ವಲ್ಪ ರಿಲೀಸ್ ಕೂಡ ಮಾಡಿದ್ದೇವೆ. ಆದರೆ ಈಗೇನು ಅವರು ಕೇಳುತ್ತಾರೆ, ಇದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ.

ಮಂತ್ರಿಮಂಡಲದ ತೀರ್ಮಾನ ಆದಮೇಲೆ ನಾನು ಮಾಡಸಿಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಈ ಮಾತನ್ನು ಮುಖ್ಯಮಂತ್ರಿಗಳೇ ಹೇಳಿದ್ದರೆ, ನನಗೆ ಸಮಾಧಾನವಾಗುತ್ತಿತ್ತು.

ಅಧ್ಯಕ್ಷರು : ಅವರು ಪ್ರಶ್ನೆ ಇರುವ ದಿವಸ, ಇದರ ಪೂರ್ಣ ವಿವರಗಳನ್ನು ತಿಳಿದುಕೊಂಡು ಎಷ್ಟು ಎಕರೆ ಇದೆ, ಎಷ್ಟು ಜನ ಉಳುಮೆ ಮಾಡುತ್ತಿದ್ದಾರೆ...

ಶ್ರೀ ಟಿ.ಬಿ. ಜಯಚಂದ್ರ : ನನ್ನ ಒಂದೇ ಕ್ಷೇತ್ರದಲ್ಲಿ 12 ಸಾವಿರ ಎಕರೆ ಬಗರ್ ಹುಕಂ ಸಾಗುವಳಿ ಆಗದೆ. ಅನ್ ಆಥರೈಸ್ಡ್ ಅಪ್ಲಿಕೇಷನ್ಸ್ ಪೆಂಡಿಂಗ್ ಇದೆ.

ಅಧ್ಯಕ್ಷರು : ನಾವು ನೋಡುತ್ತೇವೆ. ಆ 12 ಸಾವಿರ ಎಕರೆಯೂ ಮಂಜೂರಾಗುವ ಹಾಗೆ ಮಾಡಿ, ಆ ಜನ ನಿಮ್ಮಜೊತೆಗೇ ಇರುವಹಾಗೆ ಮಾಡಿ, ಮತ್ತೆ ನೀವು ಸದನಕ್ಕೆ ಬರುವುದಕ್ಕೆ ಎಲ್ಲಾ ವ್ಯವಸ್ಥೆ ಮಾಡುತ್ತೇವೆ. ನನಗೆ ಗೊತ್ತಾಯಿತು, ಅಷ್ಟು ಗೊತ್ತಾಗುವುದಿಲ್ಲವೇ?

ರಾಜ್ಯದಲ್ಲಿ ಹಸಿರು ಕಾರ್ಡುದಾರರಿಗೆ ಪಡಿತರ ಪ್ರಮಾಣ ಕಡಿತ.

247(2089)-ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಕೇಂದ್ರ ಸರ್ಕಾರದ ಹೊಸ ಪಡಿತರ ನೀತಿಯಂತೆ ಕರ್ನಾಟಕದಲ್ಲಿರುವ ಹಸಿರು ಕಾರ್ಡುದಾರರಿಗೆ ಪಡಿತರ ವಿತರಣೆ ಮಾಡಲು ಕೇಂದ್ರ ಸರ್ಕಾರವು ಒದಗಿಸಿರುವ ಸಹಾಯಧನ ಎಷ್ಟು? (ಗೋಧಿ ಹಾಗೂ ಅಕ್ಕಿಗೆ ಪ್ರತ್ಯೇಕ ವಿವರ ನೀಡುವುದು)

ಆ) ಕೇಂದ್ರ ಸರ್ಕಾರವು ಈ ಸಹಾಯಧನ ನೀಡುವುದಕ್ಕಿಂತ ಮೊದಲು ರಾಜ್ಯ ಸರ್ಕಾರ ಹಸಿರು ಕಾರ್ಡುದಾರರಿಗೆ ಹಾಗೂ ಕೇಸರಿ ಕಾರ್ಡುದಾರರಿಗೆ ಎಷ್ಟು ಸಹಾಯಧನ ಒದಗಿಸುತ್ತಿದ್ದಿತು. (ಗೋಧಿ ಹಾಗೂ ಅಕ್ಕಿಗೆ ಪ್ರತ್ಯೇಕ ವಿವರ ನೀಡಿದೆ)

ಇ) ಕೇಂದ್ರ ಸರ್ಕಾರದಿಂದ ಈಗ ಪಡಿತರ ವಿತರಣೆಗೆ ಕೇಂದ್ರದ ಸಹಾಯಧನ ಲಭ್ಯವಾಗುತ್ತಿದ್ದರೂ ಸಹ ರಾಜ್ಯದಲ್ಲಿ ಹಸಿರು ಕಾರ್ಡುದಾರರ ಪಡಿತರ ಆಹಾರಧಾನ್ಯ ಬೆಲೆ ಹೆಚ್ಚಿಸಲು ಕಾರಣಗಳೇನು?

ಈ) ಕೇಸರಿ ಕಾರ್ಡುದಾರರ ಪಡಿತರ ಪ್ರಮಾಣ ಕಡಿತ ಮಾಡಲು ಕಾರಣಗಳೇನು?

ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಭಾರತ ಸರ್ಕಾರವು ನಿರ್ದಿಷ್ಟ ಗುರಿ ಯೋಜನೆ ಯಡಿಯಲ್ಲಿ ಯಾವುದೇ ರೀತಿಯ ಸಹಾಯಧನವನ್ನು ಒದಗಿಸಿಲ್ಲ. ಆದರೆ 28.75 ಲಕ್ಷ ಕುಟುಂಬಗಳಿಗೆ ಆಹಾರ ಧಾನ್ಯಗಳನ್ನು ಕಡಿಮೆ ದರದಲ್ಲಿ ಒದಗಿಸುತ್ತಿದೆ. ಈ ಹಸಿರು ಕಾರ್ಡ್‌ದಾರರು ತಿಂಗಳಿಗೆ 10 ಕಿ.ಜಿ.